ಕನ್ನಡ ವಿವೇಕ

# ಪರಧರ್ಮ ಸೈರಣೆಯೆಂಬ ಚಿನ್ನ

ಕಸವರಮೆಂಬುದು ನೆಱೆ ಸೈ
ರಿಸಲಾರ್ಪೊಡೆ ಪರವಿಚಾರಮಂ ಧರ್ಮಮುಮಂ
–ಕವಿರಾಜಮಾರ್ಗ, ಶ್ರೀವಿಜಯ



**ಅಂತಃಕರಣ** ಮತ್ತು ಸೈರಣೆಯಿಂದ ಆರ್ದ್ರಗೊಂಡ ಕನ್ನಡ ಮಣ್ಣಿನ ಚಹರೆಗಳಲ್ಲಿ ಬಹುತ್ವವೂ ಒಂದು. ಈ ಬಹುತ್ವ ಬಣ್ಣಗಳಿಗೆ ಸಂಬಂಧಿಸಿದ್ದಷ್ಟೇ ಅಲ್ಲ; ಭಾವಗಳಲ್ಲಿ ಮೂಡಿರುವಂತಹದ್ದೂ ಹೌದು, ಕನ್ನಡ ಸಮಾಜವನ್ನು ಪೋಷಿಸುತ್ತಿರುವ ಅಂತರ್ಜಲವೂ ಹೌದು. ಕುವೆಂಪು ಅವರ 'ಸರ್ವ ಜನಾಂಗದ ಶಾಂತಿಯ ತೋಟ' ಮಾತು ಕರ್ನಾಟಕದ ಬಹುತ್ವವನ್ನು ಸೂಚಿಸುವಂತಹದ್ದು. 'ಕನ್ನಡವೆಂದರೆ ತಾಯಿಯೆ, ದೇವಿಯೆ?' ಎಂದು ಪ್ರಶ್ನಿಸುವ ಗೋಪಾಲಕೃಷ್ಣ ಅಡಿಗರು, ಆ ಪ್ರಶ್ನೆಗೆ ಉತ್ತರವಾಗಿ 'ನಾನೂ ನೀನೂ ಅವರು' ಎಂದು ಉತ್ತರಿಸುತ್ತಾ, 'ತಿಮ್ಮನ, ಬೋರನ, ಈರಗಮಾರರ ಹೃದಯದ ಸಹಜ ತರಂಗ' ಎಂದು ಉದ್ಗರಿಸುತ್ತಾರೆ.

ಬಹುತ್ವ ಎನ್ನುವುದು ಕನ್ನಡ ಜನನಾಡಿಯ ಜೊತೆಗೆ ನುಡಿಯಲ್ಲೂ ಒಡಮೂಡಿರುವಂತಹದ್ದು. ಮಣ್ಣಿನ ಬಣ್ಣ ಬದಲಾದಂತೆ, ಭಾಷೆಯ ಸೊಗಡೂ ಭಿನ್ನವಾಗುತ್ತದೆ. 'ಹಲವು ಕನ್ನಡಂಗಳು' ಎನ್ನುವುದು ಕನ್ನಡದ ನುಡಿ ವೈವಿಧ್ಯದ ಜೊತೆಗೆ, ಬಹುತ್ವದ ಸೌಂದರ್ಯದ ಸಂಕೇತವೂ ಹೌದು.

ಬಹುತ್ವದ ತಿಳಿವಳಿಕೆ ಕನ್ನಡಕ್ಕೆ ಬಂದುದು ಎಲ್ಲಿಂದ? ಅದು ಸಾವಿರಾರು ವರ್ಷಗಳ ಹಿಂದಿನಿಂದಲೂ ಜನಜೀವನದಲ್ಲಿ ಹಾಸುಹೊಕ್ಕಾಗಿರುವುದನ್ನು ಕವಿರಾಜಮಾರ್ಗಕಾರ ಸೂಚಿಸುತ್ತಿರುವಂತಿದೆ. 'ಕವಿರಾಜಮಾರ್ಗ' ಕನ್ನಡದ ಮೊದಲ ಕೃತಿ. ಕಾವ್ಯಕಾರಣ, ಸಾಮಾಜಿಕ, ಸಾಂಸ್ಕೃತಿಕ, ರಾಜಕಾರಣ – ಎಲ್ಲ ನಿಟ್ಟಿನಲ್ಲೂ ಅದು ಆಚಾರ್ಯಕೃತಿ. ಕನ್ನಡ ರಾಜಮಾರ್ಗದ ಈ ಕೃತಿಯಲ್ಲಿ ಮಾರ್ಗಕಾರ ಹೇಳುವ ಮಾತು: 'ಕಸವರಮೆಂಬುದು ನೆರೆ ಸೈರಿಸಲಾರ್ಪಡೆ ಪರವಿಚಾರಮುಮಂ, ಧರ್ಮಮುಮಂ.'

ಕಸವರ ಎಂದರೆ ಚಿನ್ನ. ಲೌಕಿಕರ ಪಾಲಿಗೆ ಚಿನ್ನ ಅಮೂಲ್ಯ ಸಂಪತ್ತು. ಕವಿರಾಜಮಾರ್ಗಕಾರ ಸಂಪತ್ತನ್ನು ಬೇರೆಯದೇ ರೀತಿಯಲ್ಲಿ ವ್ಯಾಖ್ಯಾನ ನೀಡಿದ್ದಾನೆ. ಆತನ ಪ್ರಕಾರ – ಪರ ಧರ್ಮವನ್ನು, ಪರರ ವಿಚಾರವನ್ನು ಗೌರವಿಸುವ, ಸಹಿಸಿಕೊಳ್ಳುವ ಮನೋಧರ್ಮವೇ ನಿಜವಾದ ಸಂಪತ್ತು.

ಕವಿರಾಜಮಾರ್ಗದ ಮೂಲಕ ಲಿಖಿತವಾಗಿ ಉದ್ಘಾಟನೆಗೊಂಡ 'ಪರಮತ ಸಹಿಷ್ಣುತೆಯ ಕನ್ನಡಮಾರ್ಗ'ದ ವಿವೇಕವನ್ನು ಕನ್ನಡ ಕಾವ್ಯಪರಂಪರೆ ಉದ್ದಕ್ಕೂ ಪೋಷಿಸಿಕೊಂಡು ಬಂದಿದೆ. ಆ ಮಾರ್ಗ ಮಾತಿನಲ್ಲಿ ಉಳಿಯದೆ ಕನ್ನಡಿಗರ ಜೀವನವೂ ಆಗಿದೆ. ಕ್ರಿ.ಶ. 850ರಷ್ಟು ಹಿಂದೆಯೇ ಪರಧರ್ಮ–ಪರವಿಚಾರಗಳ ಕುರಿತ ಸೈರಣೆಯನ್ನು ಪ್ರತಿಪಾದಿಸಿದ 'ಕವಿರಾಜಮಾರ್ಗ', ಕನ್ನಡದ ಮೂಲಕ ವಿಶ್ವಕ್ಕೆ ದೊರೆತ ಅಪೂರ್ವ ದರ್ಶನ.

**–ಮಹತಿ**

Printed and Published by B.A. Ravi on behalf of **The Printers (Mysore) Private Ltd.** Printed at M/s. Rajhan's Enterprises, No.134, 4th Main Road, Industial Town, Rajajinagar, Bangalore - 560 044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560 074. Editor: **K.N. SHANTH KUMAR.**

Editorial Office: 75, M.G. Road, Bengaluru - 560 001, E-mail: editormy@mayura.co.in, Phone: 080-45557333, Editorial: 45557264, Circ: 45557200/220, © All rights reserved. Reproduction in whole or in part without permission is prohibited. RNI No 17129/68